ಕಾವ್ಯಸಂಕ



ಆರಿಫ್ ರಾಜಾ

ಕವಯಿತ್ರಿ
**ಯಲ್ಲಿ ಧರ್ಮವಂತಿ**
ದೇಶ: **ಇಂಡೋನೇಷಿಯಾ**

# ನಾನು ಕಂಡುಕೊಂಡ ಅಡ್ಡದಾರಿ 'ಕಾವ್ಯ'

1985ರ ಡಿಸೆಂಬರ್ 25ರಂದು ಜನಿಸಿದ ಯಲ್ಲಿ ಧರ್ಮವಂತಿ ಇಂಡೋನೇಷಿಯಾದ ಹೊಸ ತಲೆಮಾರಿನ ಕವಯಿತ್ರಿ. ಪಶ್ಚಿಮ ಕರಾವಳಿಯ ಕ್ರುಯಿಯಲ್ಲಿ ವಾಸವಾಗಿರುವ ಇವರಿಗೆ ಮೂವರು ಗಂಡು ಮಕ್ಕಳಿದ್ದಾರೆ. ಕ್ರುಯಿ ಇವರ ಹುಟ್ಟೂರು ಹೌದು. Sanjor Induh kepira (2018), In Dang Tayap Sang Kaban (2022),Someday 2023) ಎಂಬ ಹೆಸರಿನ ಕವನ ಸಂಕಲನಗಳು ಪ್ರಕಟವಾಗಿದ್ದು, Dang Miwang Niku Ading (2020) ಕವನ ಸಂಕಲನಕ್ಕೆ 2021ರ 'Rancage' ಸಾಹಿತ್ಯ ಪುರಸ್ಕಾರ ದೊರಕಿದೆ. ಬಂದರ್ ಲಾಂಪುಂಗ್‌ನ ತುಲಾಂಗ್ ಬವಾಂಗ್ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಆಫ್ ಕಮ್ಯುನಿಕೇಷನ್ ಸೈನ್ಸ್‌ನಲ್ಲಿ ಪದವಿ ಪಡೆದ ಯಲ್ಲಿ ಧರ್ಮವಂತಿ, ಪ್ರಸ್ತುತ ಹೊಟೇಲ್ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ Entrepreneur ಆಗಿದ್ದಾರೆ

